ಶ್ಲೋಕಗಳಿರುವ ಮಹಾಭಾರತವನ್ನು ಸ್ವಾರಸ್ಯಗೆಡದಂತೆ ಕನ್ನಡದಲ್ಲಿ ನಿರೂಪಿಸಲು ಪಂಪನಿಗೆ ಸಾಧ್ಯವಾದದ್ದು ಕನ್ನಡ ಭಾಷೆಯ ಶಕ್ತಿಯನ್ನೂ ಮಹಾಕವಿಯ ಪ್ರತಿಭೆಯನ್ನೂ ಒಟ್ಟಾಗಿಯೇ ನಮ್ಮ ಮುಂದಿಡುತ್ತದೆ. ಇಷ್ಟಿದ್ದರೂ ಈ ಕೃತಿಗೆ ಅಖಿಲಭಾರತ ಮಟ್ಟದಲ್ಲಿ ಸಿಗಬೇಕಾದಷ್ಟು ಮನ್ನಣೆ ಇನ್ನೂ ದೊರಕಿಲ್ಲ. ವ್ಯಾಸರು ಸಂಸ್ಕೃತದಲ್ಲಿ ಬರೆದ 'ಮಹಾಭಾರತ'ವನ್ನು ಕನ್ನಡದಂಥ ದೇಸೀ ಭಾಷೆಯಲ್ಲಿ ಮೊದಲ ಬಾರಿಗೆ ಬರೆದವನು ಪಂಪ. ಆಮೇಲೆ ತಮಿಳು, ಮಲೆಯಾಳಂ, ತೆಲುಗು, ಒಡಿಯಾ ಮೊದಲಾದ ಭಾಷೆಗಳಲ್ಲಿ ಮಹಾಭಾರತವನ್ನು ಬರೆಯಲಾಯಿತು. ಹೀಗೆ ಬರೆಯುವಾಗ ಪಂಪನು ತಾನು ವ್ಯಾಸರು ಬರೆದ ಮಹಾಭಾರತವೆಂಬ ಸಾಗರವನ್ನು ಈಜುತ್ತೇನೆ, ಆದರೆ ಕವಿವ್ಯಾಸ ಎಂಬ ಅಹಂಕಾರ ನನಗಿಲ್ಲ 'ವ್ಯಾಸ ಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ ವ್ಯಾಸನೆಂಬ ಗರ್ವಮೆನಗಿಲ್ಲ' ಎಂಬ ಅತ್ಯಂತ ವಿನಯದ ಮಾತನ್ನು ಹೇಳಿಕೊಂಡಿದ್ದಾನೆ.

ಕನ್ನಡದಲ್ಲಿ ಭಾರತವನ್ನು ಬರೆಯುವಾಗ ಪಂಪನು ತನಗೆ ಜೈನ ಮತ ಅಧ್ಯಯನದಿಂದ ದೊರೆತ ವಿಚಾರಶೀಲತೆಯನ್ನೂ ವೈದಿಕ ಪರಂಪರೆಯ ಅಧ್ಯಯನದಿಂದ ದತ್ತವಾದ ಪುರಾಣ ಕಲ್ಪನೆಯನ್ನೂ ಹದವಾಗಿ ಬಳಸಿಕೊಳ್ಳುತ್ತಾನೆ. ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಇತಿಹಾಸ ಮತ್ತು ಪುರಾಣಗಳ ನಡುವಣ ಅಂತರವನ್ನು ಕಡಿಮೆ ಮಾಡಿಕೊಳ್ಳುತ್ತಾನೆ.

ಅಸಾಮಾನ್ಯ ಪ್ರತಿಭೆಯ ಪಂಪನು ಸಂಸ್ಕೃತ ಭಾರತವನ್ನು ಕನ್ನಡವಾಗಿಸುವಾಗ ಕೆಲವಾದರೂ ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅದರಲ್ಲಿ ಬಹಳ ಮುಖ್ಯವಾದದ್ದು ಕೃಷ್ಣನ ಪಾತ್ರವನ್ನು ಗೌಣಗೊಳಿಸಿದ್ದು. ಮಹಾಭಾರತವು ಹೇಗೆ, ಯಾರಿಂದ ಲೋಕಪೂಜ್ಯವಾಯಿತು ಎಂದು ಹೇಳುವಾಗ ಪಂಪನು ಕೃಷ್ಣನಿಗೆ ಅಲ್ಲೊಂದು ಜಾಗವನ್ನೇ ಕೊಡುವುದಿಲ್ಲ. ಅದರ ಬದಲು ಛಲದಲ್ಲಿ ದುರ್ಯೋಧನ, ಸತ್ಯ ಅಥವಾ ಕೃತಜ್ಞತೆಯಲ್ಲಿ ಕರ್ಣ, ಪೌರುಷದಲ್ಲಿ ಭೀಮಸೇನ, ಬಲದಲ್ಲಿ ಶಲ್ಯ, ಔನ್ನತ್ಯದಲ್ಲಿ ಭೀಷ್ಮ, ಬಿಲ್ಗಾರಿಕೆಯಲ್ಲಿ ದ್ರೋಣ, ಸಾಹಸ ಕಾರ್ಯಗಳಲ್ಲಿ ಅರ್ಜುನ ಮತ್ತು ಧಾರ್ಮಿಕ ವಿಷಯಗಳಲ್ಲಿ ಧರ್ಮರಾಯ ಎಂದು ಹೇಳುತ್ತಾನೆ. ತನ್ನ ದೈವಿಕ ಶಕ್ತಿಯಿಂದ ಎಲ್ಲ ಪಾತ್ರಗಳನ್ನೂ ಗೊಂಬೆಗಳ ಹಾಗೆ ಕುಣಿಸಬಲ್ಲ ಕೃಷ್ಣನಿಗೆ ಸ್ವತಃ ಇಲ್ಲಿ ಅವಕಾಶವೇ ಇಲ್ಲದ್ದರಿಂದ ಉಳಿದ ಪಾತ್ರಗಳೆಲ್ಲ ತಮ್ಮ ಜವಾಬ್ದಾರಿಯನ್ನು ತಾವೇ ಹೊತ್ತುಕೊಳ್ಳಬೇಕಾಗುತ್ತದೆ. ಹೀಗಾಗಿ ಪಂಪಭಾರತವು ಅನೇಕ ಮಾನವೀಯ ಮೌಲ್ಯಗಳ ನಡುವಣ ಸಂಘರ್ಷವೆಂಬಂತೆ ರೂಪುಗೊಂಡಿತು.

ಇವತ್ತು ಬಹಳ ಚರ್ಚೆಯಲ್ಲಿರುವ ಭಗವದ್ಗೀತೆಗೆ ಕನ್ನಡದ ಆದಿ ಕಾವ್ಯದಲ್ಲಿ ಅಂತಾ ಮಹತ್ವವೇನೂ ಇಲ್ಲ. ಕುರುಕ್ಷೇತ್ರ ಯುದ್ಧ ಆರಂಭವಾಗುವ ಹೊತ್ತು ವಿರೋಧೀ ಬಣದಲ್ಲಿ ತನ್ನವರ ಮುಖಗಳನ್ನೇ ಕಂಡ ಅರ್ಜುನನ್ನು ಸಹಜವಾಗಿ ವಿಷಾದ ಆವರಿಸುತ್ತದೆ. ಅವನ ವಿಷಾದ ಕಳೆಯಲು ಕೃಷ್ಣ ಸುದೀರ್ಘವಾಗಿ ಪ್ರವಚನ ಮಾಡುತ್ತಾನೆ. ಅದುವೇ ಭಗವದ್ಗೀತೆ. ಈಗ ಲಭ್ಯವಿರುವ ಭಗವದ್ಗೀತೆಯಲ್ಲಿ ಒಟ್ಟು 18 ಅಧ್ಯಾಯಗಳಿವೆ. ಗೀತೆಯು ನಿರ್ವಿವಾದವಾಗಿ ಶ್ರೀಕೃಷ್ಣನ ಅಪಾರ ಮಹಿಮೆಯನ್ನು ಕೊಂಡಾಡುವ ಗ್ರಂಥ. ಆದರೆ, ಪಂಪನು ಇಡೀ ಭಗವದ್ಗೀತಾ ಸನ್ನಿವೇಶವನ್ನು ಕೃಷ್ಣನಿಗೆ ಅಪಚಾರವಾಗದ ರೀತಿಯಲ್ಲಿ ಕೇವಲ ಒಂದೇ ಒಂದು ವೃತ್ತದಲ್ಲಿ ಹೇಳಿ ಮುಗಿಸಿದ್ದಾನೆ

'ಚಾತುರ್ವರ್ಣ್ಯಮ್ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' (ಗುಣಕರ್ಮಗಳನ್ನು ಅನುಸರಿಸಿ ನಾಲ್ಕು ವರ್ಣಗಳನ್ನು ಸೃಷ್ಟಿಮಾಡಿದೆ) ಎಂದ ಕೃಷ್ಣನನ್ನು ಜಾಗರೂಕತೆಯಿಂದ ಬದಿಗೆ ಸರಿಸಿದ ಪಂಪನಿಗೆ ಅದೇ ಕಾರಣಕ್ಕೆ ವರ್ಣಾಶ್ರಮ ಧರ್ಮ ಉಂಟುಮಾಡಿದ ಕೆಲವಾದರೂ ಅನಾಹುತಗಳನ್ನು ಪರಿಶೀಲಿಸಲು ಸಾಧ್ಯವಾಗಿದೆ. ಈ ಹಂತದಲ್ಲಿ ಅವನ ಕಣ್ಣಿಗೆ ಬಿದ್ದದ್ದು ಕರ್ಣ. ಆತ ಹುಟ್ಟಿನಿಂದ ಸೂರ್ಯಪುತ್ರ, ಆದರೆ ಲೋಕದ ಕಣ್ಣಿಗೆ ಸೂತ ಪುತ್ರ. ಮೊದಲನೆಯದು ಸೂರ್ಯನ ಮೂಲಕ ದೈವಿಕವೂ, ಕುಂತಿಯ ಮೂಲಕ ಜೈವಿಕವೂ ಆದರೆ ಎರಡನೆಯದು ಸೂತನಾದ ಅಧಿರಥ ಮತ್ತು ಅವನ ಹೆಂಡತಿ ರಾಧೆಯ ಮೂಲಕ ಒಂದು ಸಾಮಾಜಿಕ ರಚನೆಯಾಗುತ್ತದೆ. ಕೌಂತೇಯನಾಗಬೇಕಾಗಿದ್ದ ಕರ್ಣನು ರಾಧೇಯನಾಗುತ್ತಾನೆ. ಇದನ್ನು ಬಹಳ ಎಚ್ಚರದಿಂದ ಪರಿಶೀಲಿಸುವ ಪಂಪನು ಕರ್ಣನ ಪರವಾಗಿ ನಿಂತು ಉಳಿದ ಪಾತ್ರಗಳನ್ನು ಪರಿಶೀಲಿಸುತ್ತಾನೆ. ಕುರುಕ್ಷೇತ್ರ ಯುದ್ಧಾರಂಭದಲ್ಲಿ ಕೌರವನು ಭೀಷ್ಮನಿಗೆ ಪಟ್ಟ ಕಟ್ಟುವಾಗ ಕೋಪಗೊಂಡ ಕರ್ಣನು 'ಕಣ್ಣು ಕಾಣದ ಈ ಮುದುಕನಿಗೆ ಪಟ್ಟಗಟ್ಟುವ ಬದಲು ವೈರಿಗಳ ನಿಟ್ಟೆಲ್ವಂ ಮುರಿವಡೆ ಎನಗೆ ಪಟ್ಟಂಗಟ್ಟಾ' ಎಂದುಬಿಡುತ್ತಾನೆ. ಅದಕ್ಕೆ ಬಹಳ ತಾಳ್ಮೆಯಿಂದ